# ೧೭. ಅಗ್ನಿಪರೀಕ್ಷೆ - ಅಯೋಧ್ಯಾಗಮನ

: **ಪಾತ್ರಗಳು** :

| | | |
|---|---|---|
| ವಿಭೀಷಣ | ರಾಮ | ಸುಗ್ರೀವ |
| ಲಕ್ಷ್ಮಣ | ಹನುಮಂತ | ಸೀತೆ |
| ಸರಮೆ | ಭರತ | ಶತ್ರುಘ್ನ |
| ಚಾರರು | ಕಪಿಗಳು | |

: **ದೃಶ್ಯಗಳು** :

ವಿಭೀಷಣನಿಂದ ರಾಮನಿಗೆ ಕಾಣಿಕೆ, ರಾಮನಿಂದ ಅಪರಿಗ್ರಹ ನಿರೂಪ, ಅಯೋಧ್ಯಾಗಮನದ ಆತುರ, ಲಕ್ಷ್ಮಣ ಸುಗ್ರೀವರ ಆತಂಕ, ಸೀತಾಗಮನಕ್ಕೆ ಸಂದೇಶ, ಸರಮೆಯ ಸಂಭ್ರಮ, ಸೀತೆಯ ಕಾತರ, ರಾಮನಿಂದ ತಿರಸ್ಕಾರ, ಅಗ್ನಿಪರೀಕ್ಷೆ, ಅಗ್ನಿಯಿಂದ ಸತ್ಯನಿರೂಪ, ರಾಮನ ಸಮಾಧಾನ, ಅಯೋಧ್ಯೆಗೆ ಪ್ರಯಾಣ, ಭರತನಿಗೆ ವಾರ್ತೆ, ಸಂತೋಷ, ಸ್ವಾಗತಸಿದ್ಧತೆ, ಪಟ್ಟಾಭಿಷೇಕ.

ಪದ್ಯಗಳು : ೭೦

# ೧೭. ಅಗ್ನಿಪರೀಕ್ಷೆ - ಅಯೋಧ್ಯಾಗಮನ

**ಕೇದಾರಗೌಳ : ಅಟ್ಟ**

ಇಂದೆನಗಾಯ್ತು ಪಟ್ಟಾಭಿಷೇಕವು ರಾಮ । ಚಂದ್ರ ನಿನ್ನಯ ದಯದಿ ತಂದೊಪ್ಪಿಸಿರುವೆ ಕಾಣಿಕೆಯ ವಸ್ತುವ ಮುದ । ದಿಂದ ಸ್ವೀಕರಿಸು ಸ್ವಾಮಿ ॥೧॥ ವನವಾಸ ವ್ರತಿ ನಾನು ಎನಗೇತಕಯ್ಯ ಈ । ಕನಕ ರತ್ನಂಗಳೀಗ ॥ ದನುಜೇಂದ್ರ ನೀನಾಗಿ ಲಂಕಾಪಟ್ಟಣದಲ್ಲಿ । ಗುಣನಿಧಿಯೆನಿಸಿ ಬಾಳು ॥ ೨ ॥ ಮನುಜ ಪಾಲನೆ ನಿನ್ನ ನಿಯಮನಿಷ್ಠೆಗೆ ಲೋಕ । ಮಣಿವುದಿನ್ನನವರತ ॥ ಅನಿಮಿಷ ಋಷಿರಾಡುತಿಹರೀಗ ನಿನ್ನಯ । ಘನ ಮಹಿಮೆಯ ಪಾಡುತ ॥ ೩ ॥ ಬರವ ನೋಡುತಲಿರ್ಪ ಭರತ ಸಾಕೇತದಿ । ಸರಿಯುತಲಿದೆ ದಿವಸ ॥ ಭರದಿಂದಲೈದ ಬೇಕಿನ್ನು ವಿಲಂಬವು । ಸರಿಯಲ್ಲೆಂದನು ಜನಪ ॥ ೪ ॥

**ಸುರುಟಿ : ಏಕ**

ಅಗ್ರಭವನೆ ಕೇಳೊ । ಸೀತೆಯ । ಶ್ರೀಘ್ರದಿ ಜತೆಗೊಳ್ಳೊ ॥ ಉಗ್ರ ಸೆರೆಯ ಪರಿಹರಿಸಿದೆ ಸರಸ ಸ । ಮಗ್ರತೆಗೇತಕೆ ತಡವೆಸಗುತಲಿಹೆ ॥ ೧ ॥ ಆತುರ ಇದಕಿಲ್ಲ । ಬಂದುದು । ಸೀತೆಗಾಗಿಯಲ್ಲ ॥ ನೀತಿಯನರಿತು ವಿಘಾತಿಸಿದೆನು ಖಳ । ವ್ರಾತವ ಮಾತಲಿ ಬಂದುದ ಮರತೆಯ ॥ ೨ ॥ ಏನಿದು ವಿಪರೀತ । ಚೋದ್ಯ ಪ್ರ । ಧಾನವಿದೀ ಚರಿತ ॥ ಸಾನುರಾಗದಲಿ ಸೀತೆಯ ಕರೆಸದೆ । ನೀನೀ ನುಡಿಯಾಡುವೆ ರಘುನಾಥನೆ ॥ ೩ ॥ ಅಹುದು ರಾಮಚಂದ್ರ ನುಡಿಯಿದು । ಸಹಜ ಸುಗುಣಸಾಂದ್ರ॥ ಮಹಿಸುತೆಯನು ಕರೆಸಿಲ್ಲಿಗೆ ಬೇಗನೆ । ಸುಹಿತವೆನುತ ಸುಗ್ರೀವನು ಪೇಳಲು ॥ ೪ ॥

**ಬಿಲಹರಿ : ಅಟ್ಟ**

ಹನುಮ ನೀ ಬಾರಿತ್ತ ಬೇಗ । ಸೀತೆ । ಗನುವನೆಲ್ಲವ ಸೂಚಿಸೀಗ ॥ ವನಿತೆಗೊಪ್ಪಿಸು ಚೂಡಾಮಣಿಯನ್ನು ದೈತ್ಯರು । ಹನನವಾದಂದವನು ಸೂಚಿಸು । ಸನುಮತಿಸಿ ಬಂದೊಡೆಯು ಬರಲೈ ॥ ೧ ॥ ಬಂದನಲ್ಲಿಂದ ಮಾರುತಿಯು । ಪಾದ । ಕೊಂದಿಸೆ ಕಂಡು ಜಾನಕಿಯು ॥ ಚಂದವೆ ಹನುಮ ಸುಕ್ಷೇಮವೆ । ರಾಮಗೆ । ಬಂದ ಭರವೇನಿದು ವಿಚಿತ್ರ ಏ । ದೆಂದು ಬೆಸಗೊಳೆ ಹನುಮನೆಂದನು ॥ ೨ ॥

**ಮೋಹನ : ಏಕ**

ಜನಕಜಾತೆ ಲಾಲಿಸವ್ವ । ಘನದುರಾತ್ಮ ದಶಶಿರಾಖ್ಯ । ದನುಜ ರೊಡನೆ ಬಂದು ಘೋರ । ರಣವ ಗೈಯಲು ॥ ೧ ॥ ಸುರವರೂಥಪದರಿ

ರಾಮ । ತರಿದ ನಿನ್ನ ರಾವಣನನು । ದುರಿತ ಸರಿದು ಶುಭದ ಶಾಂತಿ । ದೊರಕಿತೀಗಳು ॥ ೨ ॥ ಸಂತಸದ ಸಂಗತಿಯ ಕೇಳಿ । ಚಿಂತಿಸುವೆ ನೀನೇಕೆ ಮನದಿ । ಬಂತದೇಕೆ ಕಣ್ಣನೀರಿ ॥ ದೇಥ ವಿಸ್ಮಯ ॥ ೩ ॥

ಶಂಕರಾಭರಣ : ತ್ರಿವುಡೆ

ಉಕ್ಕಿದಾನಂದದಲಿ ಹೃದಯವು । ಬಿಕ್ಕಳಿಸಿತೇನೆಂಬೆ ನಯನದೊ । ಳುಕ್ಕಿದುದು ಆನಂದಬಾಷ್ಪವು । ದುಃಖವಲ್ಲೈ ನುಡಿಯಲು । ಶಬ್ದ ಸಿಗದು ॥ ೧ ॥ ವಾರ್ತೆ ಇದು ಪ್ರಿಯವೆನಗೆ ನೀನಿದ । ಕೀರ್ತಿಸಿದೆ ನಿನಗೇನ ನೀಡಲಿ । ಧಾತ್ರಿ ಮೂರನು ನೀಡಿದರು ಇ । ಷ್ಟಾರ್ಥವಿತ್ತಂತಾಗದು । ಬಡವೆಯಾದೆ ॥ ೨ ॥

ಕೇದಾರಗೌಳ : ಝಂಪೆ

ಸುತ್ತುವರಿಯುತ ನಿನ್ನನು । ಪೀಡಿಸಿದ । ದುಷ್ಟೆಯರ ತೋರು ನೀನು॥ ಕುತ್ತಿ ಕೊಲ್ಲುವೆನವರನು । ಬಹುಮಾನ । ವಿತ್ತಂತೆ ಬಲಿಗೊಳುವೆನು ॥ ೧ ॥ ದುರುಳನಾಜ್ಞೆಯ ಮನ್ನಿಸಿ । ನಿದ್ದೆ ಗೆ । ಟ್ಟಿರುಳು ಹಗಲಲ್ಲಿ ನೆಲಸಿ ॥ ಪರಿಚರ್ಯೆ ಗೈದರವರು । ತಪ್ಪಿಲ್ಲ । ಚರನೀತಿಯಂತಿರ್ದರು ॥ ೨ ॥ ಮನ್ನಿಸುವನವರನೆಲ್ಲ । ಮಣಿಯ ನೀ । ನಿನ್ನೊಮ್ಮೆ ತಂದೆಯಲ್ಲ । ನಿನ್ನೊಳೇನೊರೆದ ರಾಮ । ಎಲ್ಲಿರ್ಪ । ಇನ್ನು ಮುಂದೇನು ನಿಯಮ ॥ ೩ ॥ ಗಿರಿ ಸುವೇಲದೊಳಿರ್ಪನು । ನಿನಗಲ್ಲಿ । ಬರಲು ಪೇಳಿರ್ಪನವನು ॥ ಅರಿತು ನಿನ್ನಿಷ್ಟದಂತೆ । ವರ್ತಿಸೌ । ಅರಿಕೆಯಿದು ಧರಣಿಜಾತೆ ॥ ೪ ॥

ಜೇಗಡೆ : ಆದಿ

ಆ ಸಮಯದೊಳಗಾ ಸರಮೆ ಸುವಿಲಾಸದಲಿ ಬಂದು । ಬಹು ಸಂ । ತೋಷದಲಿ ನಿಂದು । ಭಕ್ತಿ ವಿ । ಶೇಷದಲಿ ತಂದು । ಬೆಲೆಯು । ಳ್ಳ ಸುವಸ್ತುವನಿತ್ತು ಮಣೆಯಲು । ಭೂಸುತೆಯು ಪರಿಕಿಸುತ ಪೇಳ್ದಳು ॥ ೧ ॥ ಏನಿದೇನಿದು ಸರಮೆ ನೀ ಮಹರಾಣಿಯಂದದಲಿ । ಸಂಭ್ರಮ ಕಾಣಿಸುವೆಯಿಲ್ಲಿ । ಬಂದೆ ಮದ್ದಾನೆ ನಡಿಗೆಯಲಿ । ವೌಲ್ಯದ । ಕಾಣಿಕೆಯನೊಪ್ಪಿಸಿದೆ ಸರಸದಿ । ಜಾಣೆ ಸಡಗರವೇನಿದೇನಿದು ॥ ೨ ॥

ಕಾನಡ : ರೂಪಕ

ದೇವಿ ನಿನ್ನ ಸೇವೆಯ ಪ್ರಭಾವದಿಂದಲಿ । ನೋವನಗಲಿ ಶುಭವ ಪಡೆದೆ ಪಾವನತೆಯಲಿ ॥ ಭೂವರೇಣ್ಯನಾದನೆನ್ನ ಕಾಂತನೀ ದಿನಾ । ಭಾವಶುದ್ಧಿಗೊಲಿದ ರಾಮ ಭಕ್ತಪೋಷಣ ॥ ೧ ॥ ತಣಿಮದೆನ್ನ ಹೃದಯ ನಿನ್ನಾನಂದ ಕಾಣುತ । ಗುಣದ ಬಳಿಗೆ ಘನತೆ ಬಹುದಲ್ಲ ಹುಡುಕುತ ॥ ವಿನಯದಿಂದ ಹಿತವ ಪೇಳಿ ಎನ್ನ ಸಲಹಿದೆ । ಮನದಿ ಹರಸುತಿರ್ದೆ ನಿನ್ನ ಗೆಲುವ ನೋಡಿದೆ ॥ ೨ ॥ ಜನಕಜಾತೆ ನಿನ್ನನಲಂಕರಿಸೆ ಬಂದೆನು । ದಿನಪಕುಲಜನೆಡೆಗೆ ಕರೆದುಕೊಂಡು ಪೋಪೆನು ॥

ಮನದಿ ಸಂಕೋಚಿಸದೆ ಹೊನ್ನಂದಣದಿ ಕುಳಿತುಕೊ । ಇನಿತು ದಿವಸ ನಡೆವ ಬಗೆಯು ಕನಸದೆಂದುಕೊ ॥ ೩ ॥

ರೇಗುಪ್ತಿ : ರಝಂಪೆ

ಹೊನ್ನಂದಣವಿದೇಕಲಂಕಾರವೇಕವ್ವ । ಎನ್ನರಸನನು ಕಾಂಬ ಭಾಗ್ಯ ॥ ಕನ್ನಡಿಯ ನಿಧಿ ಕೈಗೆ ದೊರೆತಂತೆ ಲಭಿಸಿಹುದು । ಧನ್ಯಳೆನಿಸಿದೆ ಸುಕೃತದಿಂದ ॥೧॥ ಕಾಲುನಡೆಯಲಿ ಬರುವೆನೇಳು ಪಥವನು ತೋರು । ಶೀಲವತಿ ನೀ ಮುಂದೆ ಸಾಗು ॥ ಆಲೋಚಿಸುತ ವೇಳೆ ಕಳೆಯಬಾರದು ಎನುತ । ಪೇಳಿ ಜತೆಗೊಂಡು ಪೋರ ಮಡಲು ॥ ೨ ॥ ಸೀತೆ ಬರುವಳು ಎನುತ ಕೋತಿಗಳು ಕುಣಿಯುತಿರೆ । ಆ ತಪನಸುತ ಕಂಡು ಮುಳಿದು ॥ ಆ ತತ್ಕ್ಷಣ ಅವರ ದಂಡಿಸುತ ದೂಡುತಿರೆ । ಖ್ಯಾತ ರಘುನಾಥ ಪೇಳಿದನು ॥ ೩ ॥ ಜಾನಕಿಯ ಬಗೆಗಾಗಿ ತ್ರಾಣವನೆ ಹೋಮಿಸಿದ । ವಾನರರು ನೋಡಲಾಕೆಯನು ॥ ಹೀನವಲ್ಲಿದು ಸ್ವಯಂವರ ಪಟ್ಟ ಮೆರವಣಿಗೆ । ಗಾ ನಿರೋಧವಿದಿಲ್ಲವೆಂದ ॥ ೪ ॥

ರೇವತಿ : ರೂಪಕ ಸಾಂಗತ್ಯ

ಸೀತೆ ಭೂಜಾತೆ ಸುನೀತೆ ವಿಖ್ಯಾತೆಯು । ಸಾತಿಶಯದ ಲಜ್ಜೆಯಿಂದ ॥ ಖ್ಯಾತ ಗುಣವ್ರಾತ ಸಂಪ್ರೀತ ರಘುಜಾತನ । ತಾ ತಳುವದೆ ನೋಡಿ ನಮಿಸೆ ॥ ೧ ॥ ಸಂದುದೇ ನಿನ್ನಿಷ್ಟದಂದದಿ ಖಳರನ್ನು । ಕೊಂದು ಬಂಧನವ ತಪ್ಪಿಸಿದೆ ॥ ಮುಂದೆ ನೀ ಮನಬಂದ ತೆರವಲ್ಲಿ ಬದುಕು ಸಾ । ಕೆಂದನು ಮುಖವನೀಕ್ಷಿಸದೆ ॥ ೨ ॥ ತನುಮನವೆಲ್ಲ ನಿನ್ನಾಧೀನಕೊಪ್ಪಿಸಿ । ದನುಜನಾಕ್ರಮಣಕ್ಕೆ ಸಿಲುಕಿ ॥ ಅನುದಿನ ನಿನ್ನ ನಾಮಾಶ್ರಯದೊಳಗಿರ್ದೆ । ಎಣಿಸದೀಶಿಕ್ಷೆ ನೀಡುವುದೆ ॥ ೩ ॥ ಎಂತಾದೊಡನ್ಯ ಸಂಪರ್ಕದಿ ಸಿಲುಕಿದ । ಕಾಂತೆ ನೀನಾದೆ ವೈದೇಹಿ । ಇಂತಾದ ಮೇಲಿನ್ನು ಸಂಬಂಧವೆನಗಿಲ್ಲ । ಪಿಂತಿರುಗಿಲ್ಲಿಂದ ಭರದಿ ॥ ೪ ॥

ಮಧ್ಯಮಾವತಿ : ಅಷ್ಟ

ಹೀಗೆ ಪೇಳುವುದೆ । ದುಃಖನು ತರು । ವಾಗ ಮೈಸೋಂಕಿದೆ ॥ ಆಗ ನಾನಸಹಾಯಳಲ್ಲವೆ ಬೆದರುತ ಕೂಗಿ ಕಂಗೆಟ್ಟೆನಲ್ಲ । ಕಾಯ್ದವರಿಲ್ಲ ॥ ೧ ॥ ಧೂರ್ತ ನಿತ್ಯ ಬಂದು । ಕಾಡುತಲಿರ್ದ । ಸ್ವಾರ್ಥಕಾಮುಕೆಂದು ॥ ಆರ್ತಳಾಗುತ ತೃಣವಿಡಿದು ಮಾತಾಡಿರ್ದೆ । ಕೀರ್ತಿಯಿಂತಾಗಿ ಹೋಯ್ತು । ಸಂಶಯ ಬಂತೆ ॥ ೨ ॥ ಬೆನ್ನ ಹಿಡಿದು ಬಾದೆ । ವನವಾಸದಿ । ನಿನ್ನ ಹಿಂದೆ ನಿಂದೆ ॥ ಕಣ್ಣುತಪ್ಪಿಸಿ ಖಳನೆನ್ನ ವಂಚಿಸಿ ತಂದ । ಹೆಣ್ಣಾಗಿ ಹುಟ್ಟಿದುದೇ । ತಪ್ಪಾದುದೆ ॥ ೩ ॥

ಸುರುಟಿ : ಮಟ್ಟೆ

ಕನಕಮೃಗವು ಮಿಂಚಿದುದಕೆ ಕನಕಲಂಕೆ ಸೇರಿದುದಕೆ । ಕನಕಗರ್ಭ ಹೊಣೆಯು ನಿನ್ನ ಹಣೆಯ ಬರಹಕೆ ॥ ಇನಕುಲದಾಚಾರವಿಡಿದ ಘನತೆಯು ಹೊಣೆ ಎನ್ನದಾಯ್ತು । ಎನಿತು ಪೇಳ್ವೊಡೀ ಕಲಂಕ ಬೇಡ ಪೋಗೆಲೆ ॥ ೧ ॥

**ಆನಂದಭೈರವಿ : ರೂಪಕ**

ಲಕ್ಷ್ಮಣ ನೀ ದಯದೋರುತ ರಕ್ಷಿಸು ಎನ್ನಯ ಮಾನವ । ಈ ಕ್ಷಣ ಶರವೆಸೆದಗ್ನಿಯ ಕುಂಡವನಣಿಗೊಳಿಸು ॥ ಸುಕ್ಷೇಮದಿ ಪೋಗುತಲಿ ನಾ ಸಾಕ್ಷಾತ್ಕರಿಸುವೆ ಶೀಲವ । ನೀಕ್ಷಿಸಲ್ಕೆ ಕುಂದಿದ್ದೊಡೆ ಮಸಿಯಾಗುವೆನಿಂದು ॥ ೧ ॥ ಪರಿಕಿಸುತಣ್ಣನ ಮುಖವನು ಮರುಗುತ ಲಕ್ಷ್ಮಣನೆದ್ದನು । ಶರ ಚಾಪವನಣಿಗೊಳಿಸುತ ಬಿಸುಸುಯ್ಯುತ ತಿರುಗಿ ॥ ಗುರಿಯಿಂದಗ್ನಿಯ ಶರದಲಿ । ಉರಿ ಕುಂಡನಣಿಗೊಳಿಸಿಯೆ । ಎರಗಿದ ಸೀತೆಗೆ ಕಂಬನಿದುಂಬಿರೆ ತಲೆಬಾಗಿ ॥ ೨ ॥

**ಭಾಮಿನಿ**

ತಾಯಿಯೇ ಭೂದೇವಿ ಬದುಕಿನ । ಧ್ಯೇಯವೇ ಶ್ರೀರಾಮ ಎನ್ನನು । ಕಾಯುವುದು ಸೌಶೀಲ್ಯವೆಂದೇ ನಂಬಿ ಬದುಕಿರುವೆ ॥ ಮಾಯಕವ ನಾನರಿಯೆ ನೀಗಳೆ । ಹಾಯುವೆನು ಯಜ್ಞೇಶ್ವರನೆ ನೀ । ನ್ಯಾಯ ನಿರ್ಣಾಯಕನೆನುತ ಧುಮುಕಿದಳು ಬೆಂಕಿಯಲಿ ॥ ೧ ॥

**ಮೋಹನ : ಏಕ**

ಥಳಥಳಿಸುತಲಗ್ನಿಯು ಮೈದೋರ್ದನು । ಹೊಳೆಯಲು ಕರದೊಳು ಜಾನಕಿಯು ॥ ಕಲಶವನೆತ್ತಿದ ಹದನದಿ ಕಾಣಿಸಿ । ನಲವಿನೊಳೆಂದನು ರಾಘವಗೆ ॥ ೧ ॥ ಸೀತೆಯಿವಳು ಪರಿಶುದ್ಧೆಯು ಸ್ತ್ರೀಯರ । ನೀತಿಗೆ ಜ್ಯೋತಿರ್ಮಣಿಯಿವಳು ॥ ಪ್ರೀತಿಯೊಳೀಕೆಯನೊಡಗೂಡಲು ವಿ । ಖ್ಯಾತಿಯನೊಡಗೊಂಡಂತಹುದು ॥ ೨ ॥

**ಸಾವೇರಿ : ಝಂಪೆ**

ಅಗ್ನಿಸಾಕ್ಷಿಯೊಳು ಕೈಪಿಡಿದೆ ಮೊದಲೀಕೆಯನು । ಅಗ್ನಿಯೇ ಕೈಗೊಪ್ಪಿಸಿದನೀಗ ಎನುತ ॥ ೧ ॥ ಅನಲಗೊಂದಿಸಿ ಜನಕ ತನುಜೆಯಳ ಕೈಪಿಡಿಯೆ । ಸನುಮತದಿ ಸರ್ವರೂ ಜಯ ಜಯಾ ಎನಲು ॥ ೨ ॥ ದೇವ ನಿನ್ನಯ ನಿಯಮ ನಿಷ್ಠೆಯ ಕಠೋರತೆಯ । ಕಾವು ಬೆಂಕಿಯ ತಣಿಸಿತೆಂದ ಸುಗ್ರೀವ ॥ ೩ ॥

**ಮೋಹನ : ಅಷ್ಟ**

ಯೋಚಿಸಬೇಡಿ ನೀವು । ಹೀಗಾದುದಕ್ಕೆ । ಆಚಾರಕ್ಕಿಲ್ಲ ನೋವು । ಗೋಚರಗೈದನಿಂದ್ರಾರಿ ಮಾಯದಿ ಹಿಂದೆ । ತಾ ಚದುರತೆಯಿಂದ ಸೀತೆಯಂದವಗೈದ ॥ ೧ ॥ ಮಾಯವೊ ನಿಜವೊ ಎಂದು । ತಿಳಿಯುವದೆಂತು । ನ್ಯಾಯವು ದೊರೆತುದಿಂದು ॥ ಕಾಯುವ ಧರ್ಮವ ನಂಬಿ ನಾವ್ ನಡೆದರೆ । ಬೇಯುವ ನೋಯುವ ಸಾಯುವ ಭಯವಿಲ್ಲ ॥ ೨ ॥ ಲೇಸಾಯ್ತು ಕಾರ್ಯವೀಗ । ಪೋಗುವೆನು ನಾ । ನಾ ಸಾಕೇತಕ್ಕೆ ಬೇಗ ॥ ತೋಷದಿ ನಿಮ್ಮವರೊಡಗೂಡಿ ರಾಜ್ಯವ । ಕ್ಲೇಶವಿಲ್ಲದೆ ಆಳಿ ಬಾಳಿ ತಾಳಿರಿ ಸುಖ ॥ ೩ ॥

**ಶಂಕರಾಭರಣ : ತ್ರಿಪುಟೆ**

ಶೀಘ್ರದಿಂದಲಯೋಧ್ಯೆಗೈದಲು । ಸಾಗಿಸೀ ಪುಷ್ಪಕವನು ॥ ರಾಘವನೆ ನಿನಗೊಪ್ಪಿಸಿದೆ ಇದನೀಗ ಸ್ವೀಕರಿಸೆಂಬೆನು ॥ ೧ ॥ ಒಂದು ಬಿನ್ನಹ ನಿನ್ನ ಜತೆಯೊಳು । ಬಂದು ನಿನ್ನಭಿಷೇಕವ ॥ ಚಂದದಿಂದೀಕ್ಷಿಸಲು ಬಯಸಿಹೆ । ವಿಂದು ನೀಡೈ ನೇಮವ ॥ ೨ ॥ ಮಿತ್ರರಲ್ಲವೆ ನಿಮ್ಮ ಮರೆವೆನೆ । ಅರ್ತಿಯಿಂದಲಿ ಬನ್ನಿರಿ ॥ ಚಿತ್ರತರ ಪುಷ್ಪಕವನೇರಿರೆ । ನುತ್ತ ಸನ್ಮಾನಿಸುತಲಿ ॥ ೩ ॥ ತಾ ಜವದೊಳೈತಂದು ಭಾರ । ದ್ವಾಜರಾಶ್ರಮದೆಡೆಯೊಳು ॥ ತೇಜದಿಂದಿಳಿದಾಗ ಹನುಮನೊ । ಳಾ ಜನಪ ನಿಂತೆಂದನು ॥ ೪ ॥

**ನಾದನಾಮಕ್ರಿಯೆ : ಮಟ್ಟೆ**

ಭರದಿ ಪೋಗು ನೀ ಭರತನಲ್ಲಿಗೆ । ಪರಿಯನೆಲ್ಲವ ಅರುಹು ಬೇಗನೆ ॥ ೧ ॥ ಹಾರ್ರಿ ಹನುಮನು ಬಂದು ಕಂಡನು । ಧೀರ ಭರತಗೆ ನಮಿಸುತೆಂದನು ॥ ೨ ॥

**ಬೇಗಡೆ : ಅಷ್ಟ**

ದಶರಥಾತ್ಮಜ ಕೇಳು ಸಂಗತಿಯ । ಶ್ರೀರಾಮ ಸಮರದಿ । ದಶಶಿರನ ಸಂಹರಿಸಿ ಬಂದಿರುವ ॥ ಎಸೆವ ಪುಷ್ಪಕವೇರಿ ಭರದಲಿ । ಅಸುರರಿಪು ವನದೊಳಗೆ ಋಷಿಗಳ । ಕುಶಲವನು ಬೆಸಗೊಳ್ಳುತಿರ್ಪನು । ಒಸಗೆಯಿದ ನಿನಗರುಹೆ ಬಂದೆನು ॥ ೧ ॥ ಭರದಿ ಬಂದಪ್ಪಿದನು ಮಾರುತಿಯ । ಉಪಚರಿಸಿ ಕೇಳಿದ । ಭರತ ರಾಮನ ಕುಶಲ ಸತ್ಕಥೆಯ ॥ ಪರಿಪರಿಯೊಳಾ ರಾಮನಿರವನು । ಸ್ಮರಿಸಿ ನಾ ಬೆಂಡಾಗುತಿರ್ದೆನು । ಮರುತಸುತ ನೀ ಬಂದು ವಾರ್ತೆಯ । ನರುಹಿ ತಣಿಸಿದೆ ಗುರುವಿನಂಪದಿ ॥ ೨ ॥ ಶತ್ರುಹನ ಕರೆಸುತ್ತ ಪೇಳಿದನು । ಶೃಂಗರಿಸಿ ಬೇಗನೆ । ಪಟ್ಟಣವ ಶ್ರೀರಾಮ ಬರುತಿಹನು ॥ ಎಷ್ಟು ಕಾಲಗಳಾಯ್ತು ವೈಭವ । ನಷ್ಟವಾಗಿದೆ ಕಾಂತಿಯಿಲ್ಲದೆ। ಶ್ರೇಷ್ಠಕಳೆಯಿಂದೇರಿ ಮೆರೆಯಲಿ । ಜ್ಯೇಷ್ಠನನು ಸತ್ಕರಿಸಬೇಕೈ ॥೩॥

**ಮಾರವಿ : ಏಕ**

ಪರಿಪರಿ ಸಿದ್ಧತೆಯಿಂದಲಿ ರಾಮನ । ಬರವನು ನೋಡುತಿರೆ ॥ ಹರಿ ತಂದನು ಸೀತಾವರನಲ್ಲಿಗೆ ಪರಿವರವನು ಸೇರಿ ॥ ೧ ॥ ಚರಣಕೆ ಮಣಿದಿಹ ಭರತನ ತಕ್ಕೈಸಿ । ಶಿರವಾಘ್ರಾಣಿಸಿದ ॥ ನಿರತವ್ರತಿಯ ತೆರ ನೀ ತಪಿಸಿದೆ ಗುಣ । ಭರಿತನು ನೀ ಭರತ ॥ ೨ ॥ ಅನುವರಿತಾ ಸುಗ್ರೀವ ವಿಭೀಷಣ । ರನು ಸತ್ಕರಿಸುತಿರೆ ॥ ಜನಕಜೆ ಕೌಸಲ್ಯಾದಿ ಹಿರಿಯರಿಗೆ । ಮಣಿದಳು ವಿನಯದಲಿ ॥ ೩ ॥

**ವಾರ್ಧಿಕ್ಯ**

ಬಂದಿಹುದು ಶುಭ ಪುಷ್ಯಲಗ್ನವೆಂದಾ ಗುರುಗ । ಳಿಂದ ಸಮಯವನರಿತು ಪಟ್ಟಾಭಿಷೇಕ ವಿಧಿ । ಯಿಂದ ಸಿಂಹಾಸನವನೇರಿದಂ ಶ್ರೀರಾಮ ಜಯಘೋಷ ಸಂದಣಿಸಲು ॥ ಬಂದ ವನವಾಸವಂ ಸತ್ಯವ್ರತಸದ್ಧರ್ಮ । ದಿಂದ ತಾನನುಭವಿಸಿ ಘನ ಸದಾಚಾರದಿಂ।ಸಂದೇಹವಿಲ್ಲದ ಸಮಾಧಾನಸಂಪದದಿ ಸಾಮ್ರಾಜ್ಯವಾಳುತಿರಲು ॥೧॥